# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/179/2018/ಎಆರ್ಇ-8

ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ:22.07.2022.

## :: ವಿಚಾರಣಾ ವರದಿ ::

**ಉಪಸ್ಥಿತರು:** **ರಾಜಶೇಖರ.ವಿ.ಪಾಟೀಲ**
ಅಪರ ನಿಬಂಧಕರು ವಿಚಾರಣೆಗಳು-8,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಶ್ರೀ.ಪರಮಶಿವಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಮುಡವಾಡಿ ಗ್ರಾಮ ಪಂಚಾಯಿತಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1.ಕಂಪ್ಲೇಂಟ್/ಉಪಲೋಕ್/ಬಿಡಿ/2074/2014/ಡಿಆರ್ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 23.02.2018.

2.ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ.ಪಿ.ಆರ್ 136 ಗ್ರಾಪಂಕ 2018 ಬೆಂಗಳೂರು, ದಿನಾಂಕ:22.03.2018

3.ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ-179/2018

*****

1. ಪ್ರಸ್ತುತ ದೂರನ್ನು ದೂರುದಾರರಾದ ಶ್ರೀಮತಿ ತಿಬ್ಬಕ್ಕ ಗಂಡ ಕರಿಗೌಡ ಅಲಿಯಾಸ್ ಚಿಕ್ಕಣ್ಣ ವಾಸ ಚಿಕ್ಕೇನಹಳ್ಳಿ, ಕನಕಪುರ ರಾಮನಗರ ಜಿಲ್ಲೆ ರವರು ಆಸನೌ ಪರಮಶಿವಯ್ಯ, ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಮುಡವಾಡಿ ಗ್ರಾಮ, ರಾಮನಗರ ಜಿಲ್ಲೆ, ನಿವೃತ್ತ ಗ್ರೇಡ್-1 ಕಾರ್ಯದರ್ಶಿ ಇವರ ವಿರುದ್ಧ ಸಲ್ಲಿಸಿರುತ್ತಾರೆ.

22/7/2022

2. ದೂರುದಾರರು ಆಸನೌ ರವರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಅನಧೀಕೃತವಾಗಿ/ಕಾನೂನು ಬಾಹಿರವಾಗಿ ದೂರುದಾರರಿಗೆ ಸಂಬಂಧಿಸಿದ ಚಿಕ್ಕೇನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿರುವ 25×55 ಖುಲ್ಲಾ ನಿವೇಶನ ಪಂಚಾಯಿತಿಯ ದಾಖಲೆಗಳಲ್ಲಿ ಅವರ ಹೆಸರಿನಲ್ಲಿ ಇದ್ದು ಅದನ್ನು ಯಾವುದೇ ಪೂರ್ವ ಸೂಚನೆ ನೀಡದೆ ಅವರ ಕೊನೆಯ ಮಗ ಕರಿಯಪ್ಪ ಇವರ ಹೆಂಡತಿ ಪದ್ಮಾ ಎನ್ನುವವರ ಹೆಸರಿಗೆ ಕಾನೂನು ಬಾಹಿರವಾಗಿ ವರ್ಗಾವಣೆ ಮಾಡಿದ್ದಾರೆಂದು ಮತ್ತು ಈ ಬಗ್ಗೆ ಖಾತಾ ಮರು ಬದಲಾವಣೆಗೆ ವಿನಂತಿಸಿದಾಗ ನಿರಾಕರಿಸಿ ತಮ್ಮ ತಪ್ಪನ್ನು ಅಲ್ಲಗಳೆದಿದ್ದಾರೆಂದು ಆರೋಪ ಮಾಡಿದ್ದಾರೆ.

3. ಸದರಿ ದೂರುದಾರರ ದೂರು ಅರ್ಜಿ ಆಧಾರದಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆ ತನಿಖೆ ಮಾಡಿ ತನಿಖೆ ಪೂರ್ಣಗೊಂಡ ನಂತರ ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ12(3) ರಡಿಯಲ್ಲಿ ಉಲ್ಲೇಖ(1) ರಲ್ಲಿ ಕಾಣಿಸಿದಂತೆ ದಿನಾಂಕ 04.05.2015 ರಂದು ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ(2) ರಲ್ಲಿ 22.03.2018 ರಂದು ಉಲ್ಲೇಖಿಸಿದ್ದಾರೆ. ಅದರ ಆಧಾರದಲ್ಲಿ ಮಾನ್ಯ ಲೋಕಾಯುಕ್ತ ರವರು ದಿನಾಂಕ:04.04.2018 ರಂದು ಅಪರ ನಿಬಂಧಕರು (ವಿಚಾರಣೆಗಳು)–8 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

4. ನಾಮನಿರ್ದೇಶನದಂತೆ ಆಪಾದಿತ ಸರ್ಕಾರಿ ನೌಕರ ಪರಮಶಿವಯ್ಯ, ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಮುರವಾಡಿ ಗ್ರಾಮ, ರಾಮನಗರ ಜಿಲ್ಲೆ, ನಿವೃತ್ತ ಗ್ರೇಡ್–1 ಕಾರ್ಯದರ್ಶಿ ಇವರ ವಿರುದ್ಧ ಅಪರ ನಿಭಂಧಕರು (ವಿಚಾರಣೆಗಳು)–8 ರವರು ದೋಷಾರೋಪಣಾ ಪಟ್ಟಿಯನ್ನು ರಚಿಸಿದ್ದು, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 04/05/2016 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ಅನುಬಂಧ–2**

**ದೋಷಾರೋಪಣೆಯ**

5. ಆಪಾದಿತ ಸರ್ಕಾರಿ ನೌಕರರು ಆದ ನೀವು ಚಿಕ್ಕಮುದವಾಡಿ ಗ್ರಾಮ ಪಂಚಾಯಿತಿಯಲ್ಲಿ ಪಿಡಿಓ ಆಗಿ ಸೇವೆ ಸಲ್ಲಿಸುತ್ತಿದ್ದಾಗ ದೂರುದಾರರಿಗೆ ಸಂಬಂಧಪಟ್ಟ ಖಾನೇಷುವಾರಿ ಸಂಖ್ಯೆ 70/06/2006 ಜಾಗಕ್ಕೆ ಸಂಬಂಧಿಸಿದಂತೆ ಖಾತೆಯನ್ನು ದಿನಾಂಕ 17.02.2014 ರಂದು

ತಿಬ್ಬಮ್ಮನವರ ಹೆಸರಿನಿಂದ ಪದ್ಮ ಎಂಬುವರ ಹೆಸರಿಗೆ ಯಾವುದೇ ದಾಖಲೆಗಳು ಇಲ್ಲದೇ ಬದಲಾವಣೆ ಮಾಡಿದ್ದು, ಖಾತೆ ಬದಲಾವಣೆ ಮಾಡಲು ಯಾರು ಅರ್ಜಿಯನ್ನು ಸಲ್ಲಿಸಿದ್ದರು ಮತ್ತು ಯಾವ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಲಾಗಿದೆ ಎನ್ನುವ ಬಗ್ಗೆ ವಿವರಗಳನ್ನು ಒಗಿಸದೇ ಅನಕ್ಷರಸ್ಥಳಾದ ದೂರುದಾರರಿಗೆ ತೊಂದರೆ ಕೊಟ್ಟು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೇ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966 (3)(i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದಾರೆ.

**ಅನುಬಂಧ-2**
**ದೋಷಾರೋಪಣೆಯ ವಿವರ**
**(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)**

6. ದೂರುದಾರರು, ತನಗೆ 3 ಜನ ಗಂಡು ಮಕ್ಕಳಿದ್ದು ಯಾರು ತನ್ನನ್ನು ನೋಡಿಕೊಳ್ಳುವುದಿಲ್ಲ ಹಾಗೂ ತಮಗೆ 2 ಹೆಣ್ಣು ಮಕ್ಕಳಲ್ಲಿ ಒಬ್ಬಳು ಬುದ್ಧಿ ಮಾಂದ್ಯಳು ಇದ್ದಾಳೆ, ಮಗಳೆ ನನ್ನನ್ನು ನೋಡಿಕೊಳ್ಳುತ್ತಿದ್ದಾಳೆ. ತನ್ನ ಅತ್ತೆ 25*55 ಅಳತೆಯ ಒಂದು ಜಾಗವನ್ನು ನನಗೆ ಕೊಟ್ಟಿದ್ದರು. ತನ್ನ ಕೊನೆಯ ಮಗ ಕರಿಯಪ್ಪ ತಾನು ಜೀವಂತ ಇರುವಾಗಲೇ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ತನ್ನ ಹೆಂಡತಿ ಪದ್ಮಾಳ ಹೆಸರಿಗೆ ಖಾತೆ ಮಾಡಿದ್ದಾರೆ. ಎದುರುದಾರರು ಇದಕ್ಕೆಲ್ಲ ಸಹಾಯ ಮಾಡಿದ್ದಾರೆ ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ಕೊಡಲಾಗಿದೆ. ಖಾತೆ ಬದಲಾವಣೆಯಾಗಿರುವುದು ತಪ್ಪು ಅಂತ ಅರ್ಜಿ ಕೊಟ್ಟರೂ ಸಹ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

7. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿನಾಂಕ 01.10.2007 ರಂದು ನಾನು ಪಂಚಾಯಿತಿಯ ಗ್ರೇಡ್-1 ಕಾರ್ಯದರ್ಶಿಯಾಗಿ ಬಂದಿರುತ್ತೇನೆ. ಈ ಮೊದಲೇ 2005-06 ರಿಂದ ಖಾತೆ ಪುಸ್ತಕದಲ್ಲಿ ಪದ್ಮ ಕೋಂ ಕರಿಯಪ್ಪ ಇವರು ಹೆಸರು ದಾಖಲಾಗಿದೆ. ದೂರುದಾರರು ಕನಕಪುರ ಪೊಲೀಸ್ ಠಾಣೆಯಲ್ಲಿ ತೀರ್ಮಾನ ಮಾಡಿಕೊಂಡಿದ್ದಾರೆ. ಆದರೆ ಖಾತೆದಾರರು ಒಪ್ಪಿಗೆ ಇಲ್ಲದೇ ಖಾತೆ ಬದಲಾವಣೆ ಮಡಲು ಬರುವುದಿಲ್ಲ ಅಂತ ತಿಳಿಸಿಲಾಗಿದೆ. ತಿಬ್ಬಮ್ಮ ಇವರ

ಹೆಸರಿನಲ್ಲಿರುವ ಖಾತೆ ನಾನು ಬದಲಾವಣೆ ಮಾಡಿಲ್ಲ. ದಿನಾಂಕ 31.08.2014 ರಂದು ನಿವೃತ್ತಿ ಹೊಂದಿರುತ್ತೇನೆ. ಆದ್ದರಿಂದ ಈ ದೂರನ್ನು ಮುಕ್ತಾಯಗೊಳಿಸಲು ಕೋರಿಕೊಂಡಿದ್ದಾರೆ.

8. ಎದುರುದಾರರು ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರು ನಿವೃತ್ತರಾಗುವ ಮೊದಲು ಪದ್ಮಾಳ ಹೆಸರಿಗೆ ಖಾತೆ ಬದಲಾವಣೆ ಮಾಡಿದ್ದಾರೆ. ನಾವು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರಿಂದ ಮೊಬೈಲ್‌ಗೆ ಕರೆ ಮಾಡಿ ಬೈದಿದ್ದಾರೆ ಅಂತ ಹೇಳುತ್ತಾರೆ. ದೂರುದಾರರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಅದು ಖಾಸೆಷುಮಾರಿ ಸೋ.70/06/06 ಅಂತ ಡಿಮಾಂಡ್ ರಿಜಿಸ್ಟರ್‌ನಲ್ಲಿ ಮತ್ತು ಕಂದಾಯ ರಶೀದಿಯಲ್ಲಿ 76/6/6 ಅಂತ ಇರುವುದರಿಂದ 2007-08 ರವರೆಗೆ ತಿಬ್ಬಮ್ಮ ಇವರ ಹೆಸರಿನಲ್ಲಿಯೇ ಇರುವುದು ಕಂಡು ಬಂದಿತ್ತು. 2014-15 ರ ಡಿಮಾಂಡ್ ರಿಜಿಸ್ಟರ್‌ನಲ್ಲಿ ಪದ್ಮ ಎನ್ನುವವರ ಹೆಸರಿಗೆ ಹೇಗೆ ಬದಲಾಯಿತು ಎನ್ನುವ ಬಗ್ಗೆ ವಿಷಯವನ್ನು ತಿಳಿದುಕೊಳ್ಳಲು ಮಾಹಿತಿಯನ್ನು ಸಲ್ಲಿಸುವಂತೆ ಇಂದಿನ ಪಿಡಿಓ ಚಿಕ್ಕಮುದವಾಡಿ ಗ್ರಾಮ ಪಂಚಾಯಿತಿ ಇವರಿಂದ ವರದಿಯನ್ನು ಕೇಳಲಾಗಿತ್ತು. ಇಂದಿನ ಪಿಡಿಓ ಚಿಕ್ಕಕಮುದವಾಡಿ ಗ್ರಾಮ ಪಂಚಾಯಿತಿ ಇವರು ಖುದ್ದು ಹಾಜರಾಗಿ ಡಿಮಾಂಡ್ ರೆಜಿಸ್ಟರ್‌ನ ಝರಾಕ್ಸ್ ನಕಲುಗಳನ್ನು ಹಾಜರುಪಡಿಸಿದ್ದಾರೆ, ಅವುಗಳನ್ನು ಗಮನಿಸಲಾಗಿ 2013-14 ರಲ್ಲಿ ಶ್ರೀಮತಿ ಪದ್ಮ ಇವರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ. ಎದುರುದಾರರು ನಾನು ಪಂಚಾಯಿತಿಗೆ ಬರುವ ಮುಂಚೆಯೇ ಶ್ರೀಮತಿ ಪದ್ಮ ಇವರ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿತ್ತು ಅಂತ ಯವುದೇ ದಾಖಲೆಗಳ ಆಧಾರವಿಲ್ಲದೇ ಹೇಳುತ್ತಿದ್ದಾರೆ. ದೂರುದಾರರಿಗೆ ಸಂಬಂಧಪಟ್ಟ ಕ್ರಮ ಸಂ:70/6/6 ಇದಕ್ಕೆ ಯಾವುದೇ ದಾಖಲೆಗಳು ಇಲ್ಲದೇ ದಿನಾಂಕ: 17.02.2014 ರಲ್ಲಿ ಖಾತೆ ಬದಲಾವಣೆ ಮಾಡಿದ್ದಾರೆ. ಇಂದಿನ ಪಿಡಿಓ ರವರು 2013-14 ನೇ ಸಾಲಿನ ಡಿಮಾಂಡ್ ರಿಜಿಸ್ಟ್‌ರ್‌ನಲ್ಲಿ ಪದ್ಮ ಅಂತ ಖಾತೆ ದಾಖಲಾಗಿದೆ ಅಂತ ಸ್ಪಷ್ಟವಾಗಿ ಹೇಳಿದ್ದಾರೆ. ಎದುರುದಾರರು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದಾರೆ ಹಾಗೂ ಶ್ರೀಮತಿ ಪದ್ಮ ಎಂಬುವವರ ಹೆಸರಿಗೆ ಖಾತೆ ಬದಲಾವಣೆ ಮಾಡಲು ಯಾರು ಅರ್ಜಿಯನ್ನು ಸಲ್ಲಿಸಿದ್ದರು? ಮತ್ತು ಯಾವ ಆಧಾರದ ಮೇಲೆ ಖಾತೆ ಬದಲಾವಣೆಯಾಗಿದೆ ಎನ್ನುವ ಬಗ್ಗೆ ವಿವರಗಳನ್ನು ಒದಗಿಸದೇ

ಅನಕ್ಷರಸ್ಥಳಾದ ದೂರುದಾರರಿಗೆ ವ್ಯಥ ತೊಂದರೆ ಕೊಟ್ಟಿದ್ದಾರೆ ಎನ್ನಲು ಸಾಕಷ್ಟು ಆಧಾರಗಳಿವೆ.

9. ಆದುದರಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(i) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡು ಬರುವುದರಿಂದ, ಎದುರುದಾರರು ದಿನಾಂಕ: 31.08.2014 ರಂದು ನಿವೃತ್ತಿ ಹೊಂದಿರುವುದರಿಂದ ಅವರ ವಿರುದ್ಧ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳು ನಿಯಮ 214(2)(ಬಿ)ರ ನಿಯಮಗಳನ್ನು ಅಳವಡಿಸಿಕೊಂಡು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎರ ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10. ಈ ಮೇಲ್ಕಂಡ ಕಾರಣಗಳಿಂದಾಗಿ, ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರೆಯುವುದು ಅಗತ್ಯ ಎಂದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ಸೇವಕರಾಗಿದ್ದು, ತನ್ನ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ. ಆದುದರಿಂದ ಮೇಲಿನ ಕಾರಣ ಹಗೂ ಕಡತದಲ್ಲಿನ ಸಾಕ್ಷ್ಯದ ಆಧಾರಗಳಿಂದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(i) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಆಪಾದಿತ ಸರ್ಕರಿ ನೌಕರರ ವಿರುದ್ಧ ಶಿಸ್ತು ನಡವಳೀಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆಗೆ ಶಿಫಾರಸ್ಸು ಮಾಡಲಾಗಿ, ಶಿಸ್ತು ನಡವಳಿಕೆಯನ್ನು

27/7/2022

ಆಪಾದಿತ ಸರ್ಕಾರಿ ನೌಕರರ ವಿರುದ್ಧ ಹೂಡಿ ಇಲಾಖಾ ವಿಚಾರಣೆಯನ್ನು ಉಲ್ಲೇಖ ಒಂದರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತ-2 ರವರಿಗೆ ವಹಿಸಿದ್ದು ಗೌರವಾನ್ವಿತ ಉಪಲೋಕಾಯುಕ್ತ-2 ರವರು ಈ ವಿಚಾರಣಾಧಿಕಾರಿಯನ್ನು ವಿಚಾರಣೆ ನಡೆಸಲು ನೇಮಕಮಾಡಿದ್ದಾರೆ. ಆದ್ದರಿಂದ ನಿಮ್ಮ ವಿರುದ್ಧ ಈ ಆಪಾದನೆ.

11. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ ಆಫ್ ಚಾರ್ಜಸ್) ಆಸನೌ ರವರಿಗೆ ಕಳುಹಿಸಿದ್ದು, ಸದರಿ ಆಪಾದಣೆ ಪ್ರತಿ ಆಸನೌ ರವರಿಗೆ ಜಾರಿಯಾಗಿ ಆಸನೌ ರವರು ದಿನಾಂಕ 14.06.2018 ರಂದು ಹಾಜರಾಗಿದ್ದು, ಆಸನೌ ರವರು ಪ್ರಥಮ ಮೌಖಿಕ ಹೇಳಿಕೆ ನಿಯಮ-11 ಕೆ.ಸಿ.ಎಸ್. ಸಿಸಿಎ ರೂಲ್ಸ್‌ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

12. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

13. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

14. ಆಸನೌ ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ತಮ್ಮ ಆಕ್ಷೇಪಣೆಯಲ್ಲಿ ದಿನಾಂಕ 01.10.2007 ರಂದು ಸದರಿಯವರು ಸದರಿ ಗ್ರಾಮ ಪಂಚಾಯಿತಿಯಲ್ಲಿ ಗ್ರೇಡ್-1 ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, 2005-06 ಕ್ಕಿಂತ ಮೊದಲೇ ಖಾತಾ ಪುಸ್ತಕದಲ್ಲಿ ಪದ್ಮಾ ಗಂಡ ಕರಿಯಪ್ಪ ಇವರ ಹೆಸರು ಸದರಿ ಸ್ವತ್ತಿನ ದಾಖಲೆಗಳಲ್ಲಿ ದಾಖಲಾಗಿದ್ದು ಮತ್ತು ದೂರುದಾರರು ಪೊಲೀಸ್ ಠಾಣೆಯಲ್ಲಿ ತಮ್ಮ ವಿವಾದವನ್ನು ಇತ್ಯರ್ಥಮಾಡಿಕೊಂಡಿದ್ದು, ಖಾತೆದಾರರ ಒಪ್ಪಿಗೆ ಇಲ್ಲದೇ ಯಾವುದೇ ಖಾತಾ ಬದಲಾವಣೆಯನ್ನು ಮಾಡಿಲ್ಲ ಪಿರ್ಯಾದಿದಾರ ತಿಬ್ಬಮ್ಮ ಇವರ ಹೆಸರಿನಲ್ಲಿರುವ ಖಾತೆ ಬದಲಾವಣೆಯಲ್ಲಿ ನನಗೆ ಯಾವುದೇ ಸಂಬಂಧವಿಲ್ಲ ಹಾಗೂ ದಿನಾಂಕ:01.08.2014 ರಂದು ನಾನು ನಿವೃತಿ ಹೊಂದಿದ್ದು, ಸದರಿ ದೂರನ್ನು ಆಧಾರ ರಹಿತವೆಂದು ಪರಿಗಣಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲು ಕೇಳಿಕೊಂಡಿದ್ದಾರೆ.

15. ಈ ವಿಚಾರಣೆಯಲ್ಲಿ ಆಸನೌ ಪರಮಶಿವಯ್ಯ, ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಮುಡವಾಡಿ ಗ್ರಾಮ, ರಾಮನಗರ ಜಿಲ್ಲೆ, ನಿವೃತ್ತ ಗ್ರೇಡ್-1 ಕಾರ್ಯದರ್ಶಿ ರವರು ತಮ್ಮ ಪರ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಿ ದಾಖಲೆಗಳನ್ನು ಗುರುತು ಹಾಕಿಕೊಂಡಿರುವುದಿಲ್ಲ.

16. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರನ್ನು ಪ್ರಾ.ಸ.1 ಎಂದು ಸಾಕ್ಷ್ಯ ಹಾಜರುಪಡಿಸಿ ತಮ್ಮ ಪರವಾಗಿ, ನಿ.ಪಿ.1 ರಿಂದ ನಿ.ಪಿ.7 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆಸನೌ ರವರಿಗೆ ಸಾಕಷ್ಟು ಸಮಯ ನೀಡಿದ್ದರೂ ತಮ್ಮ ಪರವಾಗಿ ಯಾವುದೇ ಮೌಖಿಕ ಹಾಗೂ ದಾಖಲೆ ಸಾಕ್ಷ್ಯವನ್ನು ಹಾಜರು ಪಡಿಸದ ಕಾರಣ ಆಸನೌ ರವರ ಪರವಾಗಿ ಯಾವುದೇ ಸಾಕ್ಷ್ಯ ಇಲ್ಲ ಎಂದು ಪರಿಗಣನೆಗೆ ತೆಗೆದುಕೊಂಡು ಆಸನೌ ಪರ ವಕೀಲರು ತಮ್ಮ ಪರವಾಗಿ ಯಾವುದೇ ಮೌಖಿಕ ಹಾಗೂ ಲಿಖಿತ ವಾದವನ್ನು ಹಾಜರುಪಡಿಸದ ಕಾರಣ ಅವರ ಪರವಾಗಿ ಯಾವುದೇ ವಾದವಿಲ್ಲ ಎಂದು ದಾಖಲೆ ಮೇಲೆ ತೆಗೆದುಕೊಂಡು ಮಂಡನಾಧಿಕಾರಿಗಳ ವಾದವನ್ನು ಆಲಿಸಿ ಪ್ರಕರಣವನ್ನು ಅಂತಿಮ ತೀರ್ಪಿಗಾಗಿ ಮುಂದೂಡಲಾಯಿತು.

17. ದಾಖಲೆಗಳನ್ನು ಪರಿಶೀಲಿಸಲಾಯಿತ್ತು, ಮಂಡನಾಧಿಕಾರಿಯವರು ವಾದವನ್ನು ಮಂಡಿಸಿರುತ್ತಾರೆ.

18. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1: ವಿಚಾರಣಾ ಪ್ರಾಧಿಕಾರವು ಆಸನೌ ರವರು ಪಂಚಾಯಿತಿ ಅಭಿವೃದ್ದಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ದೂರುದಾರರ ಸ್ವತ್ತಿನ ಸಂಬಂಧಿಸಿದಂತೆ ಕಾನೂನು ಬಾಹಿರವಾಗಿ ಅವರಿಗೆ ಯಾವುದೇ ಸೂಚನೆ ನೀಡದೆ ಅವರ ಮಗ ಕರಿಯಪ್ಪ ರವರ ಹೆಂಡತಿ ಪದ್ಮಾ ಇವರ ಹೆಸರಿನಲ್ಲಿ ಕಾನೂನು ಬಾಹಿರ ಖಾತಾ ಬದಲಾವಣೆ ಮಾಡಿ ಕರ್ತವ್ಯ ಲೋಪವೆಸಗಿದ್ದಾರೆ ಎಂದು ಆಪಾದಿಸಲಾದ ಆರೋಪಗಳನ್ನು ಸಾಬೀತುಪಡಿಸಿದ್ದಾರೆಯೇ?**

**ಅಂಶ–2: ಆದೇಶವೇನು?**

19. ಕಡತವನ್ನು ಪರಿಶೀಲಿಸಲಾಯಿತು, ಲಭ್ಯವಿರುವ ಮೌಖಿಕ ಮತ್ತು ಲಿಖಿತ ದಾಖಲೆ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

20. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ನಕರಾತ್ಮಕ**
**ಅಂಶ 2: ಅಂತಿಮ ಆದೇಶದಂತೆ.**

27/7/2022

:: **ಕಾರಣಗಳು** ::

**21. ಅಂಶ 1:**

22. ಮಂಡನಾಧಿಕಾರಿಗಳು ಆಸನೌ ರವರ ಮೇಲೆ ಮಾಡಿದ ಪ್ರಾ.ಸ.1ರವರ ಆರೋಪಗಳನ್ನು ಸಾಬೀತುಪಡಿಸಲು ಪ್ರಾ.ಸ.1 ದೂರುದಾರರ ಸಾಕ್ಷ್ಯವನ್ನು ಹಾಜರುಪಡಿಸಿದ್ದಾರೆ ಮತ್ತು ಅವರ ಮುಖಾಂತರ ಅವರ ಪರವಾಗಿ ನಿ.ಪಿ–1 ರಿಂದ ನಿ.ಪಿ–3 ರವರೆಗೆ ದಾಖಲೆಗಳನ್ನು ನಿಶಾನೆ 1 ರಿಂದ 7 ಎಂದು ಗುರುತು ಹಾಕಿಸಿಕೊಂಡಿದ್ದಾರೆ.

23. ಪ್ರಾ.ಸ.1 ತಮ್ಮ ಮೌಖಿಕ ಸಾಕ್ಷ್ಯದಲ್ಲಿ ಸದರಿಯವರಿಗೆ 6 ಮಕ್ಕಳಿದ್ದು, ಕರಿಯಪ್ಪ ರವರು 5ನೇ ಮಗನಾಗಿದ್ದು, ಆತನ ಹೆಂಡತಿ ಹೆಸರು ಪದ್ಮಾ ಎಂದು ಇರುತ್ತದೆ. ಸದರಿಯವರಿಗೆ ಪ್ರಾ.ಸ–1 ರವರಿಗೆ ಚಿಕ್ಕೇನಹಳ್ಳಿಯಲ್ಲಿ ಅವರ ಅತ್ತೆ ವರ್ಗಾವಣೆ ಮಾಡಿದ ಖುಲ್ಲಾ ಜಾಗೆ ಸ್ವತ್ತು ಅವರ ಹೆಸರಿನಲ್ಲಿ ಖಾತಾ ಬದಲಾವಣೆ ಆಗಿದ್ದು, ಅದನ್ನು ಅವರು ಬೇರೆಯವರಿಗೆ ಎಂದೂ ವರ್ಗಾಯಿಸಿಲ್ಲ. ಪಂಚಾಯಿತಿಯ ದಾಖಲೆಗಳಲ್ಲಿ ಅವರ ಹೆಸರು ನಿರಂತರವಾಗಿ ಕಂಡು ಬರುತ್ತಿತ್ತು.

24. ಅಲ್ಲದೇ ಮುಂದುವರೆದು ಆಸನೌ ರವರು ಚಿಕ್ಕೇನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ದೂರುದಾರರಿಗೆ ಯಾವುದೇ ಪೂರ್ವ ಸೂಚನೆ ನೀಡದೇ ಅವರ ಹೆಸರನ್ನು ಪಂಚಾಯಿತಿ ದಾಖಲೆಗಳಿಂದ ಕಡಿತಗೊಳಿಸಿ ಅವರ ಮಗ ಕರಿಯಪ್ಪನ ಹೆಂಡತಿ ಪದ್ಮಾ ಅವರ ಹೆಸರಿನಲ್ಲಿ ಖಾತಾ ಬದಲಾವಣೆ ಮಾಡಿ ಅನ್ಯಾಯ ಮಾಡಿದ್ದಾರೆಂದು ಈ ಬಗ್ಗೆ ವಿಚಾರಿಸಿದಾಗ ಬೇಜವಾಬ್ದಾರಿಯಾಗಿ ಉತ್ತರ ನೀಡಿ ತಮ್ಮ ಕರ್ತವ್ಯ ಹೊಣೆಗಾರಿಕೆಯಲ್ಲಿ ನುಣಿಚಿಕೊಂಡಿದ್ದಾರೆಂದು ಸಾಕ್ಷಿ ನುಡಿದಿದ್ದಾರೆ.

25. ಪ್ರಾ.ಸ.1 ರವರು ತಮ್ಮ ಪರವಾಗಿ ನಿ.ಪಿ–1, ನಿ.ಪಿ–2 ಮತ್ತು ನಿ.ಪಿ–3 ತಾವು ನೀಡಿದ ದೂರು ದಾಖಲೆಗಳನ್ನು ಗುರುತುಹಾಕಿಸಿಕೊಂಡಿದ್ದಾರೆ. ಪೊಲೀಸರಿಗೆ ನೀಡಿದ ದೂರಿನ ನಕಲು ಮತ್ತು ಆಸನೌ ರವರು ನೀಡಿದ ಆಕ್ಷೇಪಣೆಗೆ ತಾವು ನೀಡಿದ ಪತ್ಯುತ್ತರ ಮತ್ತು ಜಿಲ್ಲಾಧಿಕಾರಿಗಳಿಗೆ ದೂರಿನ ನಕಲನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿ.ಪಿ–4 ರಿಂದ ನಿ.ಪಿ–6 ರವರೆಗೆ ಗುರುತು ಹಾಕಿಸಿಕೊಂಡಿದ್ದಾರೆ. ಮತ್ತು ಇನ್ನೊಂದು ಪ್ರತ್ಯುತ್ತರದ ನಕಲನ್ನು ನಿ.ಪಿ–7 ಎಂದು ಗುರುತು ಹಾಕಿಸಿಕೊಂಡಿದ್ದಾರೆ.

26. ಪ್ರಾ.ಸ.1 ರವರನ್ನು ಆಸನೌ ಪರ ವಕೀಲರು ವಿವರವಾದ ಪಾಟೀ ಸವಾಲನ್ನು ಕೈಗೊಂಡಿದ್ದು ಸದರಿ ಪಾಟೀ ಸವಾಲಿನಲ್ಲಿ ಪ್ರಾ.ಸ.1 ರವರು ತಮ್ಮ ಕುಟುಂಬದಲ್ಲಿ ಅವರ ಗಂಡ

ಬದುಕಿರುವಾಗಲೇ ಅವರು ಹಾಗೂ ಅವರ ಒಟ್ಟು ತಮ್ಮ 6 ಮಕ್ಕಳ ಮಧ್ಯ ಆಸ್ತಿ ವಿಭಜನೆ ಮಾಡಿ ಸದರಿ ನಿವೇಶನ ತಮ್ಮ ಗಂಡನ ಹಿರಿಯರ ಪಿತ್ರಾರ್ಜಿತ ಆಸ್ತಿಯಾಗಿದ್ದು, ಅವರ ಜೀವಿತ ಕಾಲದಲ್ಲಿ ಅವರ ಅತ್ತೆ ಪತ್ರ ಬರೆಯುವ ಮೂಲಕ ವರ್ಗಾವಣೆ ಮಾಡಿದ್ದಾರೆ ಮತ್ತು ಯಾವ ತರಹದ ವರ್ಗಾವಣೆ ಪತ್ರ ಎಂದು ತನಗೆ ಗೊತ್ತಿಲ್ಲ. ಸದರಿ ನಿವೇಶನಕ್ಕೆ ಅವರು ಸಲ್ಲಿಸಿದ ಕಂದಾಯ ತೆರಿಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಮತ್ತು ಪ್ರಾ.ಸ.1 ಹೆಸರಿನಲ್ಲಿ ಖಾತಾ ಬದಲಾವಣೆ ಆದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದು ಪಾಟೀ ಸವಾಲಿನಲ್ಲಿ ನುಡಿದಿದ್ದಾರೆ.

27. ಅಲ್ಲದೇ ಪಾಟೀ ಸವಾಲಿನಲ್ಲಿ ಮುಂದುವರೆದು ಪ್ರಾ.ಸ.1 ರವರು ಖಾತಾ ಬದಲಾವಣೆಯಲ್ಲಿ ಎಷ್ಟು ದಿವಸ ಆಗಿದೆ ಎಂದು ತಮಗೆ ಗೊತ್ತಿಲ್ಲ ಮತ್ತು ಖಾತಾ ಬದಲಾವಣೆ ಆದ ಬಗ್ಗೆ ಪಂಚಾಯಿತಿಗೆ ದೂರು ಸಲ್ಲಿಸುವ ಮತ್ತು ಮೇಲ್ಮನವಿ ಸಲ್ಲಿಸಿಲ್ಲ ಮತ್ತು ಪಂಚಾಯತಿ ಚುನಾಯಿತ ಅಧ್ಯಕ್ಷ, ಸದಸ್ಯರನ್ನು ಭೇಟಿ ಮಾಡಿಲ್ಲ ಮತ್ತು ಲೋಕಾಯುಕ್ತ ದೂರನ್ನು ಹಾಗೂ ದಾಖಲೆಗಳನ್ನು ಅವರ ಮಗಳು ವಕೀಲರ ಮುಖಾಂತರ ಹಾಜರು ಪಡಿಸಿದ್ದಾಳೆ. ಸದರಿ ಖಾತಾ ಬದಲಾವಣೆಯಲ್ಲಿ ಪದ್ಮಾ ಅವರ ಹೆಸರಿಗೆ ಯಾವ ಆಧಾರದಲ್ಲಿ ಆಗಿದೆ ಎಂದು ತಮಗೆ ಗೊತ್ತಿಲ್ಲ ಎಂದು ಮತ್ತು ಕನಕಪುರ ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲಾಗಿದ್ದು, ಅದಾದ ನಂತರ ಈ ಕಛೇರಿಗೆ ದೂರು ಸಲ್ಲಿಸಿದ್ದಾರೆಂದು ನುಡಿದಿದ್ದಾರೆ.

28. ಪ್ರಾ.ಸ.1 ರವರು ಸಲ್ಲಿಸಿದ ದೂರನ್ನು ನಿ.ಪಿ–1 ರಿಂದ ನಿ.ಪಿ–3 ದೂರಿನ ಪ್ರತಿಗಳಾಗಿದ್ದು, ನಿ.ಪಿ–4 ಪೊಲೀಸರಿಗೆ ನೀಡಿದ ದೂರಿನ ಪ್ರತಿ, ನಿ.ಪಿ–5 ಆಸನೌ ರವರು ಸಲ್ಲಿಸಿದ ಆಕ್ಷೇಪಣೆಗಳಿಗೆ ಪ್ರತ್ಯುತ್ತರ, ನಿ.ಪಿ–6 ಜಿಲ್ಲಾಧಿಕಾರಿಗಳಿಗೆ ನೀಡಿದ ತಕರಾರು ಆಗಿದೆ. ನಿ.ಪಿ–7 ಲೋಕಾಯುಕ್ತ ಕಚೇರಿಯ ಉಪನಿಬಂಧಕರು–5 ರವರು ಪೂರ್ವ ತನಿಖೆ ಮಾಡುವಾಗ ಸಲ್ಲಿಸಿದ ಆಕ್ಷೇಪಣೆ ಮತ್ತು ದಿನಾಂಕ 18.12.2014 ರಂದು ನೀಡಿದ ಪಂಚಾಯಿತಿಯ ಹಿಂಬರಹ ಮತ್ತು ತೆರಿಗೆ ಪಾವತಿ ನಕಲುಗಳು ಆಗಿವೆ.

29. ಪ್ರಾ.ಸ.1 ರವರ ಗಣನೀಯ ಆರೋಪವೇನೆಂದು ಆಸನೌ ಪಂಚಾಯಿತಿಯ ಕಾರ್ಯದರ್ಶಿಗಳು ದೂರುದಾರರಿಗೆ ಮಾಹಿತಿ ನೀಡಿದ ಖಾತಾ ಸಂಖ್ಯೆ 70/6–6 ಇದನ್ನು ಅವರ ಮಗ ಕರಿಯಪ್ಪನ ಹೆಂಡತಿ ಪದ್ಮಾ ರವರಿಗೆ ಖಾತಾ ಬದಲಾವಣೆ ಮಾಡಿದ್ದಾಗಿದೆ.

30. ಪ್ರಾ.ಸ–1 ರವರು ಯಾವ ದಾಖಲೆ ಆಧಾರದ ಮೇಲೆ ಸದರಿ ನಿವೇಶನ ಸಂಖ್ಯೆ 70/06/06 ಎಂದು ತಮ್ಮ ಹೆಸರು ನೋಂದಾಯಿತವಾಗಿದೆ ಎಂದು ದಾಖಲೆಗಳ್ನು ಪಂಚಾಯಿತಿಯ ಖಾತಾ ನಕಲನ್ನು ಹಾಜರು ಪಡಿಸಿಲ್ಲ. ಇದಕ್ಕೆ ಪೂರಕವಾಗಿ ಕೇವಲ ದಿನಾಂಕ 18.12.2014

ರಂದು ಚಿಕ್ಕಮುಡವಾಡಿ ಗ್ರಾಮ ಪಂಚಾಯಿತಿಯ ಕಚೇರಿಯಿಂದ ಹಿಂಬರಹ ನೀಡಿದ್ದು ಅದರಲ್ಲಿ ತಿಬ್ಬಮ್ಮ ರವರ ಅರ್ಜಿಯ ಆಧಾರದಲ್ಲಿ ನಿವೇಶನ ಸಂಖ್ಯೆ 70/06/06 ಇದಕ್ಕೆ ಸಂಬಂಧಿಸಿದಂತೆ 2007-08 ರವರೆಗೆ ಅವರ ಹೆಸರು ಕಂಡು ಬರುತ್ತಿದ್ದು, ನಂತರ ಸಾಲಿನ ಡಿಮಾಂಡ್ ರೆಜಿಸ್ಟರ್ಸ್/ಖಾತಾ ದಾಖಲೆಯಲ್ಲಿ ಪಂಚಾಯಿತಿಯಲ್ಲಿ ಲಭ್ಯವಿರುವುದಿಲ್ಲ. ಆದರೆ 2014-15 ನೇ ಸಾಲಿನ ಡಿಮಾಂಡ್ ರೆಜಿಸ್ಟರ್ಸ್‌ನಲ್ಲಿ ಪದ್ಮಾ ಗಂಡ ಕರಿಯಪ್ಪ ರವರ ಹೆಸರಿನಲ್ಲಿ ಬದಲಾಗಿದೆ ಎಂದು ಹಿಂಬರಹ ನೀಡಿದ್ದು ಕಂಡು ಬರುತ್ತಿದೆ. 2014 ರಂದು ಪಂಚಾಯಿತಿ ತೆರಿಗೆ ರಶೀದಿಯಲ್ಲಿ ಪದ್ಮಾ ಇವರ ಹೆಸರಿನಲ್ಲಿ ಸಂದಾಯ ಮಾಡಿದ್ದು ಕೂಡಾ ಕಂಡು ಬರುತ್ತಿದೆ.

31. ಪ್ರಾ.ಸ-1 ರವರು ಎದುರುದಾರರ ಕರ್ತವ್ಯ ಲೋಪವನ್ನು ಸಾಬೀತುಪಡಿಸಲು ಪ್ರಥಮವಾಗಿ ಸದರಿ ಸ್ವತ್ತಿಗೆ ತಮ್ಮ ಹೆಸರಿನಲ್ಲಿ ಖಾತಾ ಇದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಬೇಕಾಗಿದೆ. ಆದರೆ ಇದಕ್ಕೆ ಸಂಬಂಧಿಸಿದಂತೆ ಯಾವುದೇ ಪಂಚಾಯಿತಿ ಡಿಮಾಂಡ್ ರೆಜಿಸ್ಟರ್‌ನಲ್ಲಿ ಹಾಜರು ಪಡಿಸಲ್ಲ ಕೇವಲ ಪಂಚಾಯಿತಿ ಹಿಂಬರಹ ಹಾಜರು ಪಡಿಸಿದ್ದು ಅದರಲ್ಲಿ ಅವರ ಹೆಸರು 2003 ರಿಂದ 2007 ರವರೆಗೆ ಮಾತ್ರ ಕಂಡು ಬರುತ್ತಿದ್ದು, ತದನಂತರದ ಪಂಚಾಯಿತಿ ದಾಖಲೆಗಳು ಲಭ್ಯವಿಲ್ಲ ಮತ್ತು 2013-14 ನೇ ಸಾಲಿನಲ್ಲಿ ಅವರ ಸೊಸೆ ಪದ್ಮಾ ಅವರ ಹೆಸರಿನಲ್ಲಿ ಖಾತಾ ಬದಲಾವಣೆ ಆಗಿದು ಕಂಡು ಬಂದಿದೆ ಎಂದು ಹಿಂಬರಹ ನೀಡಲಾಗಿದೆ.

32. ಎದುರುದಾರರು ಎಲ್ಲಾ ಆರೋಪಗಳನ್ನು ಅಲ್ಲಗಳೆದು ತಾವು ದಿನಾಂಕ:01.10.2007 ರಂದು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದು, ಅವರು ನಿವೃತ್ತಿ ಆಗುವ ಮೊದಲೇ ದೂರುದಾರರ ಸೊಸೆ ಪದ್ಮಾ ಅವರ ಹೆಸರಿನಿಂದ ಖಾತಾ ಬದಲಾವಣೆ ಆಗಿದೆ ಮತ್ತು ತಮ್ಮ ಕಾರ್ಯ ಅವಧಿಯಲ್ಲಿ ತಾವು ಯಾವುದೇ ಖಾತಾ ಬದಲಾವಣೆ ಮಾಡಿಲ್ಲ ಮತ್ತು ದೂರುದಾರರ ಮತ್ತು ಅವರ ಸೊಸೆ ಪದ್ಮಾ ಕನಕಪುರ ಪೊಲೀಸ್ ಠಾಣೆಯಲ್ಲಿ ರಾಜೀ ಮಾಡಿಕೊಂಡಿದ್ದು ಮತ್ತು ದಿನಾಂಕ:31.08.2014 ರಂದು ನಿವೃತ್ತಿ ಹೊಂದಿದ್ದರಿಂದ ತಮಗೂ ಮತ್ತು ಖಾತಾ ಬದಲಾವಣೆಗೂ ಯಾವುದೇ ಸಂಬಂಧವಿಲ್ಲ ಎಂದು ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ.

33. ಪ್ರಾ.ಸ.1 ರವರ ಮೌಖಿಕ ಸಾಕ್ಷಿ ಮತ್ತು ಅವರು ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಯಾವ ಆಧಾರದಲ್ಲಿ ಸದರಿಯವರ ಹೆಸರಿನಲ್ಲಿ ಖಾತಾ ಬದಾವಣೆ ಆಗಿದೆ ಎಂದು ಕಂಡು ಬರುತ್ತಿಲ್ಲ ಮತ್ತು ನಿಖರವಾಗಿ ಯಾವ ವರ್ಷ ಯಾವ ತಿಂಗಳು ಅವರ

ಸೊಸೆ ಪದ್ಮಾ ಇವರ ಹೆಸರಿನಲ್ಲಿ ಬದಲಾವಣೆ ಆಗಿದೆ ಎಂದು ಕೂಡಾ ಕಂಡು ಬರುತ್ತಿಲ್ಲ. ಆಸನೌ ರವರ ಪ್ರಕಾರ ದಿನಾಂಕ 31.08.2014 ರಂದು ಸದರಿಯವರು ನಿವೃತ್ತಿ ಹೊಂದಿದ್ದಾರೆಂದು ಉಲ್ಲೇಖ ಮಾಡಿದ್ದಾರೆ.

34. ಅದು ಅಲ್ಲದೇ ದಾಖಲೆಗಳನ್ನು ಪರಿಶೀಲಿಸಿದಾಗ 2007 ರಿಂದ 2014 ರವರೆಗೆ ನಿವೇಶನ ಸಂಖ್ಯೆ 70/06/06 ಇದಕ್ಕೆ ಸಂಬಂಧಿತ ಯಾವುದೇ ದಾಖಲೆಗಳು ಪಂಚಾಯಿತಿಯಲ್ಲಿ ಲಭ್ಯವಿಲ್ಲವೆಂದು ಹಿಂಬರಹ ಕೂಡಾ ಕಂಡು ಬರುತ್ತಿದೆ.

35. ದೂರುದಾರರು ಮತ್ತು ಪದ್ಮಾ ಎನ್ನುವವರ ಹೆಸರಿನಲ್ಲಿ ಖಾತಾ ಬದಲಾವಣೆ ಆಗಿದೆ ಎನ್ನುವ ವಿಷಯದಲ್ಲಿ ದೂರುದಾರರು ಮತ್ತು ಸದರಿ ಪದ್ಮ ಸಂಬಂಧದಲ್ಲಿ ಅತ್ತೆ ಮತ್ತು ಸೊಸೆಯಾಗಿದ್ದು ಸದರಿ ಪದ್ಮಾ ದೂರುದಾರರ ಮಗ ಕರಿಯಪ್ಪನ ಹೆಂಡತಿಯಾಗಿದ್ದು ತಮ್ಮ ಕುಟುಂಬದ ಆಂತರಿಕ ವ್ಯವಸ್ಥೆಯಲ್ಲಿ ವ್ಯತ್ಯಾಸಗಳು ಬಂದ ನಂತರ ದೂರುದಾರರು ತಮ್ಮ ಇನ್ನೊಬ್ಬ ಮಗಳ ಸಹಾಯದಿಂದ ಈ ದೂರು ಸಲ್ಲಿಸಿರಬಹುದೆಂದು ಕಂಡು ಬರುತ್ತಿದೆ.

36. ಈ ಎಲ್ಲಾ ಸಾಕ್ಷ್ಯಗಳನ್ನು ಗಮನಿಸಿದಾಗ ಆಸನೌ ರವರ ದುರ್ನಡತೆಯ ಬಗ್ಗೆ ಆರೋಪ ಸಾಬೀತುಪಡಿಸುವ ಹೊಣೆಗಾರಿಕೆ ಪ್ರಾ.ಸ-1 ರವರ ಮೇಲೆ ಇದ್ದು ತಮ್ಮ ಆರೋಪಕ್ಕೆ ಪೂರಕವಾಗಿ ನಂಬಿ ಆಧಾರವಾಗಿಟ್ಟುಕೊಂಡು ನಿರ್ಧಾರಕ್ಕೆ ಬರುವ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಅಲ್ಲದೇ ಯಾವ ದಿನ, ತಿಂಗಳು, ವರ್ಷದಂದು ದೂರುದಾರರ ಹೆಸರನ್ನು ಕಡಿತಗೊಳಿಸಿ ಪದ್ಮಾ ಅವರ ಹೆಸರಿನಲ್ಲಿ ಖಾತಾ ಬದಲಾವಣೆ ಆಗಿದೆ ಎಂದು ಮತ್ತು ನಿಖರವಾದ ದಿನ, ತಿಂಗಳು, ವರ್ಷದಂದು ಖಾತಾ ಬದಲಾವಣೆಯಾದಾಗ ಎದುರುದಾರರು ಸದರಿ ಪಂಚಾಯಿತಿಯಲ್ಲಿ ಆಸನೌ ರವರು ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ದಾಖಲೆಗಳ ಪರಿಶೀಲನೆಯಲ್ಲಿ 2007 ರಿಂದ 2014 ರ ಮಧ್ಯದಲ್ಲಿ ದೂರುದಾರರ ಹೆಸರು ಕಡಿತಗೊಳಿಸಿ ಅವರ ಸೊಸೆ ಪದ್ಮಾ ಇವರ ಹೆಸರು ದಾಖಲಾಗಿದ್ದು, ಪ್ರಸ್ತುತ ದೂರುದಾರರು ದಿನಾಂಕ 03.07.2014 ರಂದು ದಾಖಲು ಮಾಡಿದ್ದು, ಕರ್ತವ್ಯ ಲೋಪ ಮಾಡಿದ ಕೃತ್ಯದ 4 ವರ್ಷದ ಒಳಗಡೆ ದೂರು ಸಲ್ಲಿಸಬೇಕಾಗಿದ್ದು ಈ ವಿಳಂಬದ ಬಗ್ಗೆ ಯಾವುದೇ ವಿವರಣೆಯನ್ನು ದೂರುದಾರರು ತಮ್ಮ ಸಾಕ್ಷ್ಯದಲ್ಲಿ ಉಲ್ಲೇಖವೂ ಮಾಡಿಲ್ಲ ಮತ್ತು ಹಾಜರು ಪಡಿಸಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸುಸಂಬದ್ಧಿತ ಪಾಟೀ ಸವಾಲನ್ನು ಎದುರುದಾರರ ವಕೀಲರು ಪ್ರಾ.ಸ-1 ರವರ ಪಾಟೀ ಸವಾಲನ್ನು ಕೈಗೊಂಡಿದ್ದಾರೆ.

37. ಸಂಕ್ಷಿಪ್ತವಾಗಿ ಪ್ರಾ.ಸ.1 ರವರ ಹೆಸರಿನಲ್ಲಿ ಸ್ವತ್ತಿನ ಬಗ್ಗೆ ಡಿಮಾಂಟ್ ರೆಜಿಸ್ಟರ್ ಹಾಜರು ಪಡಿಸಿಲ್ಲ ಮತ್ತು ನಿಖರವಾಗಿ ಯಾವ ದಿನ, ತಿಂಗಳು, ವರ್ಷದಂದು ಸದರಿಯವರ ಹೆಸರು 2007 ರಿಂದ 2014 ರ ಮಧ್ಯದ ಅವಧಿಯಲ್ಲಿ ಕಡಿತ ಗೊಂಡ ಬಗ್ಗೆ ದಾಖಲೆಗಳು ಕಂಡು ಬರುತ್ತಿಲ್ಲ ಮತ್ತು ಎದುರುದಾರು ದೂರುದಾರ ಸೊಸೆ ಪದ್ಮಾ ರವರ ಹೆಸರಿನಲ್ಲಿ ತಾವು ಕರ್ತವ್ಯಕ್ಕೆ ಹಜರಾಗುವ ಮೊದಲೆ ಬದಲಾವಣೆ ಆಗಿದೆ ಎಂದು ಮತ್ತು ದಿನಾಂಕ 31.8.2014 ರಂದು ನಿವೃತ್ತಿ ಹೊಂದಿದ್ದಾರೆಂಬ ಆಕ್ಷೇಪಣೆಯನ್ನು ಅಲ್ಲಗಳೆಯುವಂತಿಲ್ಲ.

**38.** ಮೇಲೆ ವಿವರಿಸಿದ ಕಾರಣಗಳು ಮತ್ತು ಕೈಗೊಂಡ ವಿವರವಾದ ಚರ್ಚೆಯ ಆಧಾರದಲ್ಲಿ ಆಸನೌ ರವರ ವಿರುದ್ಧ ಮಾಡಿದ ಆಪಾದನೆಗಳನ್ನು ಶಿಸ್ತು ಪ್ರಾಧಿಕಾರವು ಸಾಬೀತುಪಡಿಸುವಲ್ಲಿ ವಿಫಲವಾಗಿದೆ ಎಂದು ನಿರ್ಣಯಕ್ಕೆ ಬರುತ್ತಾ, ಮೇಲಿನ ಅಂಶ-1 ನ್ನು ನಕರಾತ್ಮಕ ಎಂದು ಉತ್ತರಿಸಲಾಗಿದೆ.

**39.** **<u>ಅಂಶ-2:</u> ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ**

<u>:: ನಿರ್ಣಯ ::</u>

ಆಸನೌ ಪರಮಶಿವಯ್ಯ, ಅಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಮುಡವಾಡಿ ಗ್ರಾಮ, ರಾಮನಗರ ಜಿಲ್ಲೆ, ನಿವೃತ್ತ ಗ್ರೇಡ್-1 ಕಾರ್ಯದರ್ಶಿ ರವರ ಮೇಲೆ ಶ್ರೀಮತಿ ತಿಬ್ಬಕ್ಕ ಗಂಡ ಕರಿಗೌಡ ಅಲಿಯಾಸ್ ಚಿಕ್ಕಣ್ಣ ವಾಸ ಚಿಕ್ಕೇನಹಳ್ಳಿ, ಕನಕಪುರ ರಾಮನಗರ ಜಿಲ್ಲೆ ರವರಿಂದ ಆಪಾದಿಸಲಾದ ಕರ್ತವ್ಯ ಲೋಪದ ಆರೋಪಗಳನ್ನು ಸಾಬೀತುಪಡಿಸಲು ಶಿಸ್ತು ಪ್ರಾಧಿಕಾರವು ವಿಫಲವಾಗಿದೆ ಎಂದು ನಿರ್ಣಯಿಸಲಾಗಿದೆ.

40. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರಿಗೆ ಮುಚ್ಚಿದ ಲಕೋಟೆಯಲ್ಲಿ ಗೌರವ ಪರಿಗಣನೆಗೆ ಸಲ್ಲಿಸಲು ಕಛೇರಿಗೆ ಆದೇಶಿಸಲಾಗಿದೆ.

(ರಾಜಶೇಖರ.ವಿ.ಪಾಟೀಲ)
ಅಪರ ನಿಬಂಧಕರು ವಿಚಾರಣೆಗಳು-7,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

**1. LIST OF WITNESSES EXAMINED ON BEHALF OF D.A:**

| | |
|---|---|
| PW1 | Smt Tibbamma, No.570, 4th cross, Indira Nagar, Near Modi Hospital, Bengaluru. (original) |

**2. LIST OF DOCUMENTS MARKED ON BEHALF OF DISCIPLINARY AUTHORITY:**

| | |
|---|---|
| Ex.P1 | Form No.1 (complaint) (original) |
| Ex.P2 | Form No.2 (original) |
| Ex.P3 | Letter dated 02.07.2014 of complainant addressed to Hon'ble Lokayukta (original) |
| Ex.P4 | Letter addressed by complainant to PSI., Kanakapura dated 20.08.2020 (Xerox copy) |
| Ex.P5 | Rejoinder of complainant dated 22.12.2015 (original) |
| Ex.P6 | Letter addressed by complainant to D.C., Ramanagara dated 02.11.2015 (Original copy) & enclosures (Xerox copy) |
| Ex.P7 | Another Rejoinder of complainant dated 04.01.2016 (original) & enclosures (Xerox copy) |

(RAJASHEKAR.V.PATIL)
Additional Registrar Enquiries-8
Karnataka Lokayukta,
Bengaluru.

**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/179/2018/ARE-8

Multi Storied Building,
Dr. B.R. Ambedkar Veedhi,
Bengaluru-560001
Date: 26th July, 2022.

# RECOMMENDATION

Sub: Departmental Inquiry against Shri Paramashivaiah, Panchayath Development Officer, Chikkamudavadi Gram Panchayath, Kanakapura Taluk, Ramanagar District (Retired Grade-1 Secretary)-reg.,

Ref: 1) Government Order No.ಗ್ರಾಅಪ/136/ಗ್ರಾಪಂಕಾ/2018, Bengaluru, dated: 22/03/2018.

2) Nomination Order No.UPLOK-2/DE/179/2018, Bengaluru, dated: 04/04/2018 of Upalokayukta, State of Karnataka, Bengaluru.

3) Inquiry Report dated: 22/07/2022 of Additional Registrar of Enquiries-8, Karnataka Lokayukta, Bengaluru.

*****

The Government by its order dated: 22/03/2018 initiated the disciplinary proceedings against Shri Paramashivaiah, Panchayath Development Officer, Chikkamudavadi Gram Panchayath, Kanakapura Taluk, Ramanagar District (Retired

Grade-1 Secretary) (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No. UPLOK-2/DE/179/2018, Bengaluru, dated: 04/04/2018 nominated Additional Registrar of Enquiries-8, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO, Shri Paramashivaiah, Panchayath Development Officer, Chikkamudavadi Gram Panchayath, Kanakapura Taluk, Ramanagar District (Retired Grade-1 Secretary) was tried for the following charges:

**ಅನುಬಂಧ–1**

**ದೋಷಾರೋಪಣೆ**

ಆಪಾದಿತ ಸರ್ಕಾರಿ ನೌಕರರು ಆದ ನೀವು ಚಿಕ್ಕಮುದವಾಡಿ ಗ್ರಾಮ ಪಂಚಾಯತಿಯಲ್ಲಿ ಪಿ.ಡಿ.ಒ. ಆಗಿ ಸೇವೆ ಸಲ್ಲಿಸುತ್ತಿದ್ದಾಗ ದೂರುದಾರರಿಗೆ ಸಂಬಂಧಪಟ್ಟ ಖಾನೇಷುಮಾರಿ ಸಂಖ್ಯೆ 70/06/2006 ಜಾಗಕ್ಕೆ ಸಂಬಂಧಿಸಿದಂತೆ ಖಾತೆಯನ್ನು ದಿನಾಂಕ 17–02–2014ರಂದು ತಿಬ್ಬಮ್ಮರವರ

ಹೆಸರಿನಿಂದ ಪದ್ಮ ಎಂಬುವರ ಹೆಸರಿಗೆ ಯಾವುದೇ ದಾಖಲೆಗಳು ಇಲ್ಲದೇ ಬದಲಾವಣೆ ಮಾಡಿದ್ದು, ಖಾತೆ ಬದಲಾವಣೆ ಮಾಡಲು ಯಾರು ಅರ್ಜಿಯನ್ನು ಸಲ್ಲಿಸಿದ್ದರು ಮತ್ತು ಯಾವ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಲಾಗಿದೆ ಎನ್ನುವ ಬಗ್ಗೆ ವಿವರಗಳನ್ನು ಒದಗಿಸದೇ ಅನಕ್ಷರಸ್ತಳಾದ ದೂರುದಾರರಿಗೆ ತೊಂದರೆ ಕೊಟ್ಟು ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ನೀವು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ (3)(i) ರಿಂದ (iii)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

4. The Inquiry Officer (Additional Registrar of Enquiries-8) on proper appreciation of oral and documentary evidence has held that, the Disciplinary Authority has 'Not Proved' the charges leveled against the DGO, Shri Paramashivaiah, Panchayath Development Officer, Chikkamudavadi Gram Panchayath, Kanakapura Taluk, Ramanagar District (Retired Grade-1 Secretary).

5. On perusal of the Inquiry Report, in order to prove the guilt of the DGO, the Disciplinary Authority has examined one witness i.e., PW-1 and Ex. P-1 to P-7 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer.

Therefore, it is hereby recommended to the Government to accept the report of Inquiry Officer and to exonerate DGO, Shri Paramashivaiah, Panchayath Development Officer, Chikkamudavadi Gram Panchayath, Kanakapura Taluk, Ramanagar District (Retired Grade-1 Secretary), of the charges leveled against him.

7. Action taken in the matter shall be intimated to this Authority.

Connected records are enclosed herewith.

26/7/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.